ಪ್ರತಿವಾದಿ ತಿಂಗಳಿಗೆ ಎರಡು ಬಾರಿ ಬಂದು ತನ್ನ ತಾಯಿ ಕಾವೇರಮ್ಮನವರನ್ನು ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸರಿ. 2 ನೇ ಪ್ರತಿವಾದಿ ಇಲ್ಲಿ ಇರದ ಕಾರಣ, ಮೂರನೆ ಪ್ರತಿವಾದಿ ಅವರಿಗೆ ದೂರದ ಸಂಬಂಧಿಯಾದ ಕಾರಣ, 1 ನೇ ಪ್ರತಿವಾದಿಯ ಕಷ್ಟ ಸುಖಗಳನ್ನು ನೋಡಿಕೊಳ್ಳಲು ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರದ ದುರುಪಯೋಗಪಡಿಸಿಕೊಂಡು 3 ನೇ ಪ್ರತಿವಾದಿ ಕಾವೇರಮ್ಮನನ್ನು ಕರೆದುಕೊಂಡು ಹೋಗಿ ಅವರ ಅರಿವಿಗೆ ಬರದಂತೆ ದಾನ ಪತ್ರ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕಾವೇರಮ್ಮನವರಿಗೆ ದಾನ ಪತ್ರ ಬರೆದುಕೊಡಲು ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮತ್ತು ನಾನು ಸುಳ್ಳು ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ ನಾನು ದಾವಾ ಆಸ್ತಿಯ ಸದ್ದುದೇಶ ಕ್ರಯದಾರಳಲ್ಲ ಎಂದರೆ ಸರಿಯಲ್ಲ ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಕ್ರಯ ಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ . ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇರದೇ ವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ

.

ಕುಣಿಗಲ್.

**O.S.No.511/2017**
**DW-1**